ದಿನಾಂಕ: 04.11.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು :8 ನೇ ಪ್ರತಿವಾದಿ ಪರ ಶ್ರೀ.ಬಿ.ವಿ.ಪಿ.ವಕೀಲರಿಂದ**

ಸರ್ವೆ ನಂ. 292, 296 ಮೊದಲು ಯಾರ ಹೆಸರಲ್ಲಿ ಇತ್ತು ಎಂದರೆ ಸಾಕ್ಷಿಯು ಖಾತುನಬಿ ಗಂಡ. ಹುಸೇನಖಾನ ದಫೇದಾರ ಇವರ ಹೆಸರಿನಲ್ಲಿ ಇತ್ತು ಎಂದು ಉತ್ತರಿಸುತ್ತಾರೆ. ಸದರಿ ಎರಡು ಜಮೀನುಗಳನ್ನು ಖಾತುನಬಿಗೆ ಯಾರು ಕೊಟ್ಟಿದ್ದರು ಎಂದರೆ ಹಸನಸಾಬ ದಫೇದಾರ ಎಂದು ಉತ್ತರಿಸುತ್ತಾರೆ. ಹಸನಖಾನ ಎನ್ನುವವರು 8 ನೇ ಪ್ರತಿವಾದಿಗೆ ಯಾವ ರೀತಿ ಸಂಬಂಧಿಕರು ಎಂದರೆ ಸಾಕ್ಷಿಯು ಸಂಬಂಧಿಕರು ಅಲ್ಲ ಎಂದು ಉತ್ತರಿಸುತ್ತಾರೆ. ಸರ್ವೆ ನಂ. 292 32-ಎಕರೆ ಇರುತ್ತದೆ. ಸರ್ವೆ ನಂ. 296 ಎಷ್ಟು ಎಕರೆ ಇದೆ ಎಂದರೆ ಸಾಕ್ಷಿಯು 4-ಎಕರೆ ಎಂದು ಉತ್ತರಿಸುತ್ತಾರೆ. ಸದರಿ ಎರಡು ಜಮೀನುಗಳನ್ನು ಎನ್.ಟಿ.ಪಿ.ಸಿ.ಗಾಗಿ ಸರಕಾರದವರು ತೆಗೆದುಕೊಂಡಿದ್ದಾರೆ ಎಂದರೆ ಸರಿ. ಸದರಿ ಎರಡು ಜಮೀನುಗಳಿಗೆ ಸರಕಾರದಿಂದ ಹಣ ಮಂಜೂರಾಗಿದೆ ಎಂದರೆ ಸರಿ. ಎರಡು ಜಮೀನಗಳನ್ನು 8 ನೇ ಪ್ರತಿವಾದಿಯ ದೊಡ್ಡಪ್ಪನಾದ ಯಾಶೀನಖಾನ ಬಾಬಾಜಾನ ಮುಲ್ಲಾರವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ.

ಯಾಶೀನಖಾನ ಬಾಬಾಜಾನ ಮುಲ್ಲಾರವರಿಗೆ ಮಕ್ಕಳು ಇಲ್ಲ ಎಂದರೆ ಸರಿ. ಹುಸೇನಬಿಯವರ ಗಂಡ ರಾಜಬೇಗ ದಿ : 30-01-1935 ಕ್ಕೆ ಮೃತ ಯಾಶೀನಖಾನ ಬಾಬಾಜಾನ ಮುಲ್ಲಾರವರಿಗೆ ಎರಡು ಜಮೀನುಗಳಿಗೆ ಸಂಬಂಧಪಟ್ಟ ಮೃತ್ಯು ಪತ್ರಗಳನ್ನು ಮಾಡಿದ್ದರು ಎಂದರೆ ಸರಿ. ಯಾಶೀನಖಾನ ಬಾಬಾಜಾನ ಮುಲ್ಲಾರವರು ತೀರಿಕೊಳ್ಳುವವರೆಗೆ ಅವರೆ ಸದರಿ ಎರಡು ಜಮೀನುಗಳಿಗೆ ಮಾಲ್ಕಿ ಮತ್ತು ಕಬ್ಜೆದಾರರಿದ್ದರು ಎಂದರೆ ಸರಿ. ಯಾಶೀನಸಾಬ ಬಾಬಾಜಾನ ಮುಲ್ಲಾರವರು ಸದರಿ ಎರಡು ಜಮೀನುಗಳಿಗೆ 8 ನೇ ಪ್ರತಿವಾದಿಗೆ ಮೃತ್ಯು ಪತ್ರ ಮಾಡಿ ಕೊಟ್ಟಿದ್ದಾರೆ ಎಂದರೆ ಇಲ್ಲ ಎಂದು ಉತ್ತರಿಸುತ್ತಾರೆ. ಸದರಿ ಮೃತ್ಯು ಪತ್ರ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ. 297 ಇದರ ಮೂಲ ನಂಬರ 175 ಎಂದರೆ ಸರಿ. ಅದರ ಕ್ಷೇತ್ರ 17-ಎಕರೆ 34-ಗುಂಟೆ ಎಂದರೆ ಸರಿ. ಇನ್ನೊಂದು ಜಮೀನು ಸರ್ವೆ ನಂ. 298 ಇದರ ಮೂಲ ನಂಬರ 178 ಇದ್ದು ಅದರ ಕ್ಷೇತ್ರ 24-ಎಕರೆ 39-ಗುಂಟೆ ಎಂದರೆ ಸರಿ. ಈ ಎರಡು ಜಮೀನುಗಳಗೆ ವಾದಿಗೆ ಯಾವುದೇ ರೀತಿಯಿಂದ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಸಂಬಂಧ ಇದೆ ಎಂದು ಉತ್ತರಿಸುತ್ತಾರೆ. ಈ ಜಮೀನುಗಳು ಹುಸೇನಬಿಯವರು ಅಸದಖಾನ ಬಾಬಾಜಾನ

ಮುಲ್ಲಾರವರ ಕೈಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಹುಸೇನಬಿಯವರು ದಿ : 7-2-1951 ರಂದು ತೀರಿಕೊಂಡರು ಎಂದರೆ ಸರಿ. ಖಾತುನಬಿ ಎನ್ನುವವರು ಹುಸೇನಬಾನುರವರ ಮಗಳು ಎಂದರೆ ಸರಿ. ಯಾಶೀನಖಾನ ಮುಲ್ಲಾ ಮತ್ತು ಖಾತುನಬಿ ಮತ್ತು ಹುಸೇನಬಾನುರವರಿಗೆ ಯಾವುದೇ ರೀತಿ ರಕ್ತ ಸಂಬಂಧ ಇಲ್ಲ ಎಂದರೆ ಸರಿ. ಹುಸೇನಬಿರವರು ತೀರಿಕೊಂಡ ನಂತರ ಖಾತುನಬಿ ತನ್ನ ಹೆಸರು ಸದರಿ ಜಮೀನುಗಳ ತಲಾಟಿಯವರಿಗೆ ಅರ್ಜಿ ಕೊಟ್ಟು ತಮ್ಮ ಹೆಸರಿಗೆ ಮಾಡಿಕೊಂಡಿದ್ದರು ಎಂದರೆ ಸರಿ. ನಂತರ ಯಾಶೀನಖಾನರವರು ಸದರಿ ವಿಷಯ ಗೊತ್ತಾಗಿ ಅರ್ಜಿಯನ್ನು ಕೊಟ್ಟು ಅವರ ಹೆಸರನ್ನು ರದ್ದು ಪಡಿಸಿದರು ಎಂದರೆ ಸರಿಯಲ್ಲ. ರದ್ದು ಪಡಿಸಿದ ನಂತರ ಸದರಿ ಎರಡು ಜಮೀನುಗಳನ್ನು ಮತ್ತು ಸರ್ವೆ ನಂ. 297, 298 ರ ಬಗ್ಗೆ ದಿ : 3-11-1998 ರಲ್ಲಿ ಮೃತ್ಯು ಪತ್ರ ಮಾಡಿದ್ದರು ಎಂದರೆ ಗೊತ್ತಿಲ್ಲ. ಎನ್.ಟಿ.ಪಿ.ಸಿ ಯಿಂದ ಹಣ ಪಡೆಯುವ ಉದ್ದೇಶದಿಂದ ನಿಮ್ಮ ತಂದೆ ಮತ್ತು ಕಾಕಂದಿರು ಈ ಸುಳ್ಳು ದಾವೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಜಮೀನಿನ ಉತಾರೆಯಲ್ಲಿ ಯಾರ ಹೆಸರು ಇದೆ ಎಂದರೆ ಸಾಕ್ಷಿಯು ನಮ್ಮ ತಂದೆಯಾದ ಅಬ್ದುಲರಹಮಾನ ದಫೇದಾರವರ ಹೆಸರು ಇದೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿ.ಡಿ.-1 ಮತ್ತು 2 ನ್ನು

ತೋರಿಸಲಾಗಿ ಅದರಲ್ಲಿ 8 ಮತ್ತು ಇನ್ನುಳಿದ ಪ್ರತಿವಾದಿಯರ ಹೆಸರು ಇದೆ ಎಂದರೆ ಸರಿಯಲ್ಲ.

ಇದೆ ನ್ಯಾಯಾಲಯದಲ್ಲಿ ನಿಮ್ಮ ತಂದೆಯವರು ಜವಾಬನ್ನು ಕೊಟ್ಟಿದ್ದಾರೆ ಅದನ್ನು ತಿಳಿದುಕೊಂಡಿದ್ದಿರಾ ಎಂದರೆ ಸಾಕ್ಷಿಯು ತಿಳಿದುಕೊಂಡಿದ್ದೇನೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನಿಗೆ 8 ನೇ ಪ್ರತಿವಾದಿ ಮಾಲೀಕನಿದ್ದು ಅವರೇ ಎನ್.ಟಿ.ಪಿ.ಸಿ. ಇಂದ ಹಣವನ್ನು ಪಡೆಯಲು ಹಕ್ಕುದಾರರು ಇದ್ದರು ಸಹ ಅವರ ಮೇಲೆ ಸುಳ್ಳು ದಾವೆ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಿಮ್ಮ ತಂದೆ ಅಬ್ದುಲರಹಮಾನ ಮತ್ತು ಜೀಲಾನಿ ಸೇರಿ ಈ ದಾವೆಯನ್ನು ಮಾಡಿದ್ದಾರೆ ಎಂದರೆ ಸರಿ. ನಿಮಗೆ ಈ ದಾವೆಯನ್ನು ಹಾಕಲು ಯಾವುದೇ ಹಕ್ಕು ಇಲ್ಲ ಮತ್ತು ಎನ್.ಟಿ.ಪಿ.ಸಿ.ಯಿಂದ ಹಣವನ್ನು ಪಡೆಯಲು ಯಾವುದೇ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು :7 ಮತ್ತು 9 ನೇ ಪ್ರತಿವಾದಿ ಪರ ಶ್ರೀ.ಎಮ್.ಆರ್.ಆಯ್. ವಕೀಲರಿಂದ**

ದಾವಾ ಆಸ್ತಿಗಳು ಮೊದಲು ಹುಸೇನಬಿ ಗಂಡ ರಾಜಾಬೆಗ ಅವರಿಗೆ ಸಂಬಂಧಪಟ್ಟಿದ್ದು ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಹುಸೇನಬಿ ನೋಂದಾಯಿತ ಕಾಗದ ಪತ್ರಗಳನ್ನು ಯಾರ್ಯಾರಿಗೆ ಮಾಡಿದ್ದಾರೆ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು

ಉತ್ತರಿಸುತ್ತಾರೆ. ಹುಸೇನಬಿ ಮುಲ್ಲಾರವರಿಗೆ ಖಾತುನಬಿ ಒಬ್ಬಳೆ ಮಗಳು ಎಂದರೆ ಸರಿ. ರಾಜಾಬೇಗರವರಿಗೆ ಒಬ್ಬಳು ಅಕ್ಕ ಬಡಿಬೀ ಎಂದು ಇದ್ದರು ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ರಾಜಾಬೇಗರವರಿಗೆ ಬಡಿಬೀ ಅಕ್ಕಳಿದ್ದು ಮೊಮ್ಮಗ ಯಾಶೀನಖಾನ ಎಂದು ಇದ್ದರು ಎಂದರೆ ಸರಿಯಲ್ಲ. ತನಗೆ ಗಂಡು ಮಕ್ಕಳು ಇಲ್ಲ ಎಂದು ಹುಸೇನಬಿ ಮತ್ತು ರಾಜಬೇಗರವರ ಹತ್ತಿರ ಯಾಶೀನಖಾನ ಇದ್ದರು ಎಂದರೆ ಸಾಕ್ಷಿಯು ಅಷ್ಟೊಂದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ಕಾರಣಕ್ಕೆ 1935 ರಲ್ಲಿ ಹುಸೇನಬಿ ದಾವಾ ಆಸ್ತಿಗಳನ್ನು ಮೃತ್ಯು ಪತ್ರದ ಮೂಲಕ ಯಾಶೀನಖಾನಗೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಆ ರೀತಿ ಕೊಟ್ಟಿದ್ದರಿಂದ ಡ ನಂ. 402 ದಿ : 3-10-1935 ರಲ್ಲಿ ನಮೂದಾಗಿತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಆ ರೀತಿ ಎಂಟ್ರಿಗೆ ಲಾಡಬೇಗ ತಕರಾರು ಮಾಡಿದ್ದ ಎಂದರೆ ಗೊತ್ತಿಲ್ಲ. ಆ ಕಾರಣಕ್ಕೆ ಇನ್ನೊಂದು ಬಾರಿ 1940 ರಲ್ಲಿ ಹುಸೇನಬಿಯವರು ಹಿಬಾಬುಲ್ ಇವಜ್ ಮೂಲಕ ದಾವಾ ಸ್ವತ್ತನ್ನು ನೋಂದಣಿ ಮಾಡಿಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆ ರೀತಿ ದಾವಾ ಆಸ್ತಿಯನ್ನು ಕೊಟ್ಟಿದ್ದರಿಂದ ಡ ನಂ. 729 ದಿ : 12-10-1944 ರಲ್ಲಿ

ನಮೂದಾಗಿತ್ತು ಎಂದರೆ ಗೊತ್ತಿಲ್ಲ. ಹಿಬಾಬುಲ್ ಇವಜ್ ಕಾಗದ ಮಾಡಿಕೊಟ್ಟಿದ್ದರಿಂದ ಯಾಶೀನಖಾನ ಸದರಿ ದಾವಾ ಆಸ್ತಿಗಳ ಮಾಲೀಕನೆಂದು ಸಾಗುವಳಿ ಮಾಡುತ್ತಾ ಬಂದಿದ್ದಾನೆ ಎಂದರೆ ಸಾಕ್ಷಿಯು ನಾವು ಮಾಡಿದ್ದೇವೆ ಎಂದು ಉತ್ತರಿಸುತ್ತಾರೆ.

ದಾವಾ ಜಮೀನುಗಳು ಇನಾಮ ಜಮೀನುಗಳ ಎಂದರೆ ಸರಿ. ಎರಡು ಜಮೀನುಗಳನ್ನು ಯಾಶೀನಖಾನ ಮುಲ್ಲಾರವರು 1963 ರಲ್ಲಿ ತಮ್ಮ ಹೆಸರಿಗೆ ರಿಗ್ರ್ಯಾಂಟ್ ಮಾಡಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. ಆ ಕಾರಣಕ್ಕೆ ಡ ನಂ. 1719 ದಿ: 16-10-1963 ರಲ್ಲಿ ನಮೂದಾಗಿತ್ತು ಎಂದರೆ ಗೊತ್ತಿಲ್ಲ.

1940 ರಿಂದ ಖಾತುನಬಿರವರ ಹೆಸರು ದಾವಾದ ಆಸ್ತಿಯಲ್ಲಿ ಇದೆ ಎಂದ ತೋರಿಸಲು ಯಾವುದೇ ದಾಖಲೆ ಹಾಜರ ಪಡಿಸಿದ್ದಿರಾ ಎಂದರೆ ಸಾಕ್ಷಿಯು ನಮ್ಮ ತಂದೆಯವರು ಇದ್ದಾಗ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಹಿಬಾಬುಲ್ ಇವಜ್ ಕಾಗದ ಕೆಳಗೆ ಹುಸೇನಬಿಯವರು ಸರ್ವೆ ನಂ. 297, 298 ಖಾತುನಬಿಯವರಿಗೆ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗಳಗೆ ತಾನು ಮಾಲೀಕ ಮತ್ತು ಯಾಶೀನಖಾನ ಮಾಲೀಕನಲ್ಲ ಎಂದು ಖಾತುಬಿಯವರು ಅವರ ಜೀವಿತಾವಧಿಯಲ್ಲಿ ಎಂದು ತಕರಾರು

ಮಾಡಿಲ್ಲ ಎಂದರೆ ಸಾಕ್ಷಿಯು ಅದು ನಮ್ಮ ತಂದೆಗೆ ಗೊತ್ತು ಎಂದು ಉತ್ತರಿಸುತ್ತಾರೆ. ನನ್ನ ಮುತ್ಯಾ ಅಸದಖಾನ 2004 ರಲ್ಲಿ ತೀರಿಕೊಂಡರು ಎಂದರೆ ಸರಿ. ಅವರು ಸಹ ಅವರ ಜೀವಿತಾವಾಧಿಯಲ್ಲಿ ಯಾಶೀನಖಾನ ದಾವಾ ಸ್ವತ್ತಿಗೆ ಮಾಲೀಕನಲ್ಲ ಎಂದು ಯಾವತ್ತು ತಕರಾರು ಮಾಡಿಲ್ಲ ಎಂದರೆ ಸಾಕ್ಷಿಯು ತಕರಾರು ಮಾಡಿಲ್ಲ ಎಂದು ಉತ್ತರಿಸುತ್ತಾರೆ. ಯಾಶೀನಖಾರವರಿಗೆ ಹೆಣ್ಣಾಗಲಿ ಗಂಡಾಗಲಿ ಮಕ್ಕಳು ಇರಲಿಲ್ಲ ಎಂದರೆ ಸರಿ. ಅವರು 1988 ರಲ್ಲಿ ತೀರಿಕೊಂಡಿದ್ದಾರೆ ಎಂದರೆ ಗೊತ್ತಿಲ್ಲ. 7 ಮತ್ತು 9 ನೇ ಪ್ರತಿವಾದಿಯ ತಂದೆ ಹೆಸರು ಮೈನುದ್ದಿನ ಎಂದರೆ ಗೊತ್ತಿಲ್ಲ. ಯಾಶೀನಖಾನರವರು ತೀರಿಕೊಂಡ ನಂತರ ದಾವಾ ಆಸ್ತಿಗೆ ಯಾರ ಹೆಸರು ದಾಖಲಾಗಿತ್ತು ಎಂದರೆ ಸಾಕ್ಷಿಯು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಈಗ ದಾವಾ ಆಸ್ತಿಗಳಿಗೆ ಯಾರ ಹೆಸರು ದಾಖಲಾಗಿವೆ ಎಂದರೆ ಸಾಕ್ಷಿಯು ನಮ್ಮ ತಂದೆ ಹೆಸರು ಇದೆ ಎಂದು ಉತ್ತರಿಸುತ್ತಾರೆ. ಖಾತುನಬಿಯವರ ಅವರ ಜೀವಿತ ಕಾಲದಲ್ಲಿ ಸರ್ವೆ ನಂ. 297, 298 7 ರಿಂದ 9 ನೇ ಪ್ರತಿವಾದಿಯರ ತಾಯಿಯಾದಂತಹ ದಾದಿಬೀಯವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. 1940 ರಿಂದ ಇಲ್ಲಿವರಗೆ ಖಾತುಬಿಯವರಿಗೆ ದಾವಾ ಆಸ್ತಿಗಳಿಗೆ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ಸಂಬಂಧ ಇದೆ ಎಂದು

ಉತ್ತರಿಸುತ್ತಾರೆ. ಈ ದಾವೆಯನ್ನು ಮಾಡುವ ಪೂರ್ವದಲ್ಲಿ ಯಾವುದೇ ದಾಖಲಾತಿಗಳನ್ನು ನೋಡದೆ ದಾವೆಯನ್ನು ಮಾಡಿದ್ದಿರಿ ಎಂದರೆ ಸಾಕ್ಷಿಯು ಕಾಗದ ಪತ್ರ ಇದೆ ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿಗೆ ಮತ್ತು ನಿಮಗೆ ಯಾವುದೇ ಸಂಬಂಧ ಇಲ್ಲದಿದ್ದರು ಸಹ ಸುಳ್ಳು ದಾವೆಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**10 ಮತ್ತು 13 ರಿಂದ 16 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರಗೆ ಸಾಕ್ಷಿಯು ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ,

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ